(ಶ್ರೀ ವಾಟಾಳ್ ನಾಗರಾಜ್ ಅವರೂ ಸಹ ಧರಣಿ ಹೂಡಿದರು)

ಡಾ : ಎಂ.ಪಿ. ಕರ್ಕಿ : ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾಗಿ ನಾನು ಕೇಳಿದಾಗ ಸರ್ಕಾರ ಎರಡು ತಿಂಗಳಾದರೂ ಕಾಗದ ಪತ್ರಗಳನ್ನು ಕೊಟ್ಟಿಲ್ಲ.

ಶ್ರೀ ಸಿ. ಬೈರೇಗೌಡ : ಸಮಿತಿ ಕೇಳಿದಾಗ ಕೊಡಲೇಬೇಕಾಗುತ್ತದೆ.

ಅಧ್ಯಕ್ಷರು : ಸ್ವಲ್ಪವೂ ತಾಳ್ಮೆ ಇಲ್ಲವಲ್ಲಾ. ಈಶ್ವರಪ್ಪನವರೇ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಇನ್ನೂ ಬಹಳ ಮಹತ್ವವಾದ ವಿಚಾರಗಳನ್ನು ಚರ್ಚೆ ಮಾಡಿ ವರದಿ ಕೊಟ್ಟಿರತಕ್ಕ ಉದಾಹರಣೆಗಳು ನಮ್ಮಲ್ಲಿ ಇವೆ. ತಾವೆಲ್ಲರೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಕೆಲಸ ಮಾಡಿರತಕ್ಕವರೇ. ಮಾನ್ಯ ವಿರೋದ ಪಕ್ಷದ ನಾಯಕರು ಕೊಟ್ಟಿರತಕ್ಕ ಸಲಹೆಯನ್ನು ನೀವು ಒಪ್ಪಿಕೊಂಡರೆ ನಾನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಇದನ್ನು ರೆಫರ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿದರೆ ಸ್ವಾಗತಿಸುತ್ತೇನೆ. ಇದನ್ನು ಎಲ್ಲರೂ ಒಪ್ಪಬೇಕು. ಏಕೆಂದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರು ವಿರೋಧ ಪಕ್ಷದವರೇ ಇರುತ್ತಾರೆ. ಯಾರೇ ಇರಲಿ ಇದ್ದಾಗ ಸ್ಕ್ರುಟಿನಿ ಮಾಡುವುದಕ್ಕೆ, ಆ್ಯಂಪಲ್ ರೆಕಾರ್ಡ್ ತರಿಸುವುದಕ್ಕೆ ಅವಕಾಶ ಇದೆ. ಅದಕ್ಕಾಗಿ ನಾನು ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಮಾನ್ಯ ಈಶ್ವರಪ್ಪನವರಿಗೆ ಸಲಹೆ ಮಾಡುತ್ತೇನೆ, ದಯವಿಟ್ಟು ಅವರೂ ಬರಲಿ. ಅವರ ಕಡೆಯ ಸದಸ್ಯರು ಇರುತ್ತಾರೆ, ನಮ್ಮ ಕಡೆಯ ಸದಸ್ಯರು ಇರುತ್ತಾರೆ, ಬೇರೆ ಪಕ್ಷದ ಸದಸ್ಯರೂ ಕೂಡ ಇರುತ್ತಾರೆ. ಹೀಗಿರುವಾಗ ಎಲ್ಲರೂ ಕೂಡ ಫೈಲ್ ತರಿಸಿ ನೋಡುವುದಕ್ಕೆ ಆಗುತ್ತದೆ, ವ್ಯತ್ಯಾಸಗಳೇನೇ ಇದ್ದರೂ ಅವನ್ನು ನಾವು ನೋಡುವುದಕ್ಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಪ್ರತಿಪಕ್ಷದ ನಾಯಕರು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಕಳುಹಿಸಬೇಕೆಂದು ಹೇಳಿದ್ದಾರೆ. ಆದರೆ ಒಂದು ವಿಚಾರ; ನಾನು ಮಾತನಾಡುತ್ತಿದ್ದಾಗ ಶ್ರೀ ರಾಜೇಂದ್ರನ್‌ರವರು ಉಲ್ಲೇಖ ಮಾಡಿದ ಅಂಶವನ್ನು ನಾನು ಉಲ್ಲೇಖ ಮಾಡಬೇಕು. ಒಬ್ಬ ವ್ಯಕ್ತಿ Who is handling accounts and purchases is continuning in the same post ನ್ಯಾಚುರಲ್ ಜಸ್ಟೀಸ್ ಏನು? ಅವರನ್ನು ಅದರಿಂದ ದೂರ ಇಡಬೇಕು. ಇನ್ನು ಏನು ಕಾರ್ಯಕ್ರಮ ಎಂಬುದು ಅಲ್ಲ ಪ್ರಶ್ನೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಏನಿದೆ ಅದು ತೀರ್ಮಾನ ಮಾಡುವಾಗಲಾದರೂ ಕೂಡ A person against whom we have made allegations cannot continue in that position. Let the Government comes out with a statement.

(Interruptions)

ಶ್ರೀ ಸಿ. ಬೈರೇಗೌಡ : ಇವರು ಹೇಳಿದ ಹಾಗೆ ಎಲ್ಲಾ ಕೇಳುವುದಕ್ಕಾಗುವುದಿಲ್ಲ. ಇವರು ಆಪಾದನೆ ಮಾಡಿದ ತಕ್ಷಣ ಅವರನ್ನು ಮನೆಗೆ ಕಳುಹಿಸುವುದಕ್ಕಾಗುವುದಿಲ್ಲ. ಆಪಾದನೆ ಮಾಡಿದ